1	2	3
07	ಶ್ರೀ ಸುಗುರೇಶ್ವರ ಸೇವಾ ಸಮಿತಿ ಟ್ರಸ್ಟ್, ಸುಕ್ಷೇತ್ರ ದೇವಸುಗೂರ್, ರಾಯಚೂರು	ರಾಯಚೂರು
08	ಇಸ್ಲಾಮಿಯಾ ಎಜುಕೇಷನ್ ಟ್ರಸ್ಟ್, ಪವನ್‌ದರ್ಗಾ ರೋಡ್ ರೋಸಾ, ಗುಲ್ಬರ್ಗಾ	ರಾಯಚೂರು
09	ಶ್ರೀಶೈಲ ಮಲ್ಲಿಕಾರ್ಜುನ ವಿದ್ಯಾ ಸಂಸ್ಥೆ, ಈಚನಾಳ,	ರಾಯಚೂರು
10	ಜವಹರ್ ಎಜುಕೇಷನ್ ಸೊಸೈಟಿ, ಯಾದಗೀರ್, ಗುಲ್ಬರ್ಗಾ	ರಾಯಚೂರು
11	ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ, ದರ್ಗಾರೋಡ್	ರಾಯಚೂರು
12	ಶ್ರೀ ಉದಕನೂರುತಾತಾ ಎಜುಕೇಷನ್ ಟ್ರಸ್ಟ್, ಲಿಂಗಸುಗೂರ್, ರಾಯಚೂರು	ರಾಯಚೂರು
13.	ಜಗದ್ಗುರು ಮರುಳಾರಾಧ್ಯ ವಿದ್ಯಾ ಸಂಸ್ಥೆ, ಕಂಬಾಲಿಹಳ,	ರಾಯಚೂರು
14.	ವಳಬಳ್ಳಾರಿ ಚೆನ್ನಬಸವೇಶ್ವರ ಎಜುಕೇಷನ್ ಸೊಸೈಟಿ, ಲಿಂಗಸೂಗೂರು, ರಾಯಚೂರು	ರಾಯಚೂರು
15.	ಡಾ: ಬಾಬಾಸಾಹೇಬ್ ಅಂಬೇಡ್ಕರ್ ವಿದ್ಯಾವರ್ಧಕ ಸಂಘ ಸುರಪುರ ಗುಲ್ಬರ್ಗಾ ಜಿಲ್ಲೆ	ರಾಯಚೂರು

ಕೇಂದ್ರ ಸರ್ಕಾರದ ಹಣವನ್ನು ಪೂರ್ತಿ ಬಳಸದಿರುವುದು

3564 (3514) : ಶ್ರೀ ಲಕ್ಷ್ಮಿನಾರಾಯಣ ಎಂಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೇಂದ್ರ ಸರ್ಕಾರ ನೀಡಿರುವ ಹಣ ಎಷ್ಟು? (ಕಳೆದ ಮೂರು ವರ್ಷಗಳ ವಿವರವನ್ನು ಯೋಜನೆವಾರು ನೀಡುವುದು)

ಆ) ಕೇಂದ್ರದ ಹಣದಿಂದ ರಾಜ್ಯದಲ್ಲಿ ಯಾವ ಕಾರ್ಯಕ್ರಮಗಳಡಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ಕಾಮಗಾರಿವಾರು ಹಣದ ವಿವರವನ್ನು ನೀಡುವುದು)

ಇ) ಕೇಂದ್ರ ಸರ್ಕಾರ ನೀಡಿರುವ ಹಣದಲ್ಲಿ ರಾಜ್ಯ ಸರ್ಕಾರ ಈವರೆಗೂ ವೆಚ್ಚ ಮಾಡಿರುವ ಹಣ ಎಷ್ಟು? (ಯೋಜನೆವಾರು ಮಾಹಿತಿ ನೀಡುವುದು)

ಈ) ಕೇಂದ್ರ ಸರ್ಕಾರದ ಹಣವನ್ನು ಪೂರ್ತಿಯಾಗಿ ಬಳಸಿಕೊಳ್ಳಲು ಕಾರಣಗಳೇನು?

ಶ್ರೀ ಎಂ. ವೈ ಗೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಈ ಕುರಿತು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಕೇಂದ್ರಸರ್ಕಾರದ ಹಣದಿಂದ ರಾಜ್ಯದಲ್ಲಿ ವಿವಿಧ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ 5,36,795 ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. 5,36,795 ಕಾಮಗಾರಿಗಳು ಇರುವುದರಿಂದ ಕಾಮಗಾರಿ ವಾರು ವಿವರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಯೋಜನೆವಾರು ವೆಚ್ಚದ ವಿವರವನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಇ) ಈ ಕುರಿತು ವಿವಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಈ) ಕೇಂದ್ರಸರ್ಕಾರದ ಹಣದಲ್ಲಿ ಜೂನ್ 2003ರ ಅಂತ್ಯದವರೆಗೆ ಶೇ. 98ರಷ್ಟು ಹಣ ಖರ್ಚು ಮಾಡಲಾಗಿದ್ದು, ಆದಾಗ್ಯೂ ಕಾರಣಗಳನ್ನು ಅನುಬಂಧ – 2ರಲ್ಲಿ ಒದಗಿಸಲಾಗಿದೆ.

ಅನುಬಂಧ–1

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

200–01, 2001–02 ಮತ್ತು 2002,03ನೇ ಸಾಲಿನ ಕೇಂದ್ರ ಪುರಸ್ಕೃತ ಹಾಗೂ ಕೇಂದ್ರವಲಯ ಯೋಜನೆಗಳಿಗೆ ಕೇಂದ್ರ ಸರ್ಕಾರ ನೀಡಿರುವ ಹಣ ಹಾಗೂ ಅದರಲ್ಲಿ ರಾಜ್ಯಸರ್ಕಾರ ಮಾಡಿರುವ ವೆಚ್ಚದ ವಿವರ ರೂ. ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆಗಳು	ಕೇಂದ್ರ ಸರ್ಕಾರ ನೀಡಿರುವ ಹಣ			ಕೇಂದ್ರಸರ್ಕಾರ ನೀಡಿರುವ ಹಣದಲ್ಲಿ ರಾಜ್ಯಸರ್ಕಾರ ವೆಚ್ಚ ಮಾಡಿರುವ ಹಣದ ವಿವರ			
		200–01	2001–02	2002–03	200–01	2001–02	2002–03	2003–04 ಜೂನ್ ಅಂತ್ಯಕ್ಕೆ
1.	ಗ್ರಾಮೀಣ ನೀರು ಸರಬರಾಜು (ಎಆರ್‌ಡಬ್ಲ್ಯೂಎಸ್)	8165.12	12714.00	13568.68	11024.90	11026.20	11590.46	2016.16
2.	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ–1ನೇ ವಾಹಿನಿ	5482.03	7610.76	8880.42	5060.22	7615.97	8651.14	953.50
3.	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ–2ನೇ ವಾಹಿನಿ	5165.38	7489.54	8548.63	6611.75	7134.04	8569.14	753.90
4.	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	10057.00	10837.00	9774.00	0.00	6413.64	9920.42	2858.00
5.	ಇಂದಿರಾ ಆವಾಸ್ ಯೋಜನೆ	4203.28	5202.70	4849.01	5122.78	5445.92	5626.86	605.59
6.	ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ	1600.56	1659.33	2686.99	3159.30	3860.54	3661.75	186.75
7.	ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ	1425.96	1961.77	2270.53	1087.50	1835.25	2302.78	476.71
8.	ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಕ್ರಮ	1516.86	1499.66	1552.66	1474.48	1514.69	1369.84	36.66
9.	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಕಾರ್ಯಕ್ರಮ	432.11	773.66	1456.13	626.34	755.32	1369.02	205.12
10.	ಉದ್ಯೋಗ ಭರವಸೆ ಯೋಜನೆ– ವಾಟರ್‌ಶೆಡ್	1778.96	816.16	786.10	706.34	1092.74	876.86	266.41
11.	ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ	637.05	994.43	1409.02	299.30	844.19	1381.03	244.53

1	2	3	4	5	6	7	8	9
12.	ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ–ಗ್ರಾಮೀಣ ನೀರು	1127.00	1127.00	1200.00	416.00	824.53	1072.57	164.55
13.	ಡಿಆರ್‌ಡಿಎ ಆಡಳಿತ	637.35	627.92	797.98	393.35	668.60	741.00	137.52
14.	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ	875.00	667.90	573.00	616.98	842.98	452.88	0.00
15.	ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಗ್ರಾಮೀಣ	563.47	750.00	1500.00	0.00	589.51	986.60	241.09
16.	ಗ್ರಾಮೀಣ ನೀರು ಸರಬರಾಜು (ಎಆರ್‌ಡಬ್ಲ್ಯೂಎಸ್) ಡಿ.ಡಿ.ಪಿ	254.50	1133.74	786.68	238.60	281.94	1074.43	167.09
17.	ಗ್ರಾಮೀಣ ನೈರ್ಮಲ್ಯ (ಆರ್‌ಶಿಆರ್‌ಎಸ್‌ಪಿ)	164.51	62.19	0.00	164.51	62.19	0.00	
18.	ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ	51.66	51.66	51.66	51.66	51.66	51.66	0.00
19.	ಯೂರೋಪಿಯನ್ ಎಕಾನಮಿಕ್ ಕಮ್ಯೂನಿಟಿ ಎಲಡ್ ಟು ಟ್ರೈನಿಂಗ್ ಸೆಂಟರ್ (ಎಎನ್‌ಎಸ್‌ಐಆರ್‌ಡಿ)	22.41	39.14	44.38	22.41	39.14	44.38	24.40
20.	ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ	25.00	0.00	10.00	38.18	77.94	10.84	0.00
	ಒಟ್ಟು	44185.21	5618.56	60745.87	37114.60	50976.99	607553.66	9338.20

ಟಿಪ್ಪಣಿ:– 1 ಪಂಚಾಯತ್ ರಾಜ್ ಸಂಸ್ಥೆಗಳಿಗೆ 1998–99 ಹಾಗೂ 1999–2000ನೇ ಸಾಲಿನ ಹತ್ತನೇ ಹಣಕಾಸು ಆಯೋಗದ ಅನುದಾನ 110.89 ಕೋಟಿ ರೂ.ಗಳನ್ನು 2000–2001ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ ಹಾಗೂ ಪೂರ್ತಿ ಹಣವನ್ನು ವೆಚ್ಚ ಮಾಡಲಾಗಿದೆ.

2. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹನ್ನೊಂದನೇ ಹಣಕಾಸು ಆಯೋಗದ ಅನುದಾನ 2001–02ನೇ ಸಾಲಿನ 78.82 ಕೋಟಿ ರೂ.ಗಳನ್ನು 2001–02ನೇ ಸಾಲಿನಲ್ಲಿ, 2000–01ನೇ ಸಾಲಿನ ಹಾಗೆ 2002–03 ನೇ ಸಾಲಿನ 157.64 ಕೋಟಿ ರೂ.ಗಳನ್ನು 2002–03ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಒಟ್ಟು ಅನುದಾನ ರೂ. 236.46 ಕೋಟಿಗಳಲ್ಲಿ ಈವರೆಗೆ ರೂ. 165.62 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ – II

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕೇಂದ್ರ ಸರ್ಕಾರದ ಹಣವನ್ನು ಪೂರ್ತಿಯಾಗಿ ಬಳಸಿಕೊಳ್ಳದಿರಲು ಕಾರಣಗಳು

1. ಕೇಂದ್ರ ಪುರಸ್ಕೃತ ಹಾಗೂ ಕೇಂದ್ರವಲಯ ಕಾರ್ಯಕ್ರಮಗಳಲ್ಲಿ ಕೇಂದ್ರಸರ್ಕಾದಿಂದ 2ನೇ ಕಂತಿನ ಅನುದಾನದ ಹೆಚ್ಚಿನ ಭಾಗವು ವರ್ಷಾಂತ್ಯದಲ್ಲಿ ಬಿಡುಗಡೆಯಾಗುವುದರಿಂದ ಪೂರ್ಣ ಪ್ರಮಾಣದ ಹಣವನ್ನು ಖರ್ಚು ಮಾಡುವಲ್ಲಿ ವಿಳಂಬವಾಗುತ್ತಿದೆ.
2. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯ ಗ್ರಾಮೀಣ ನೀರು ಸರಬರಾಜು, ಗ್ರಾಮೀಣ ಆವಾಸ್ ಯೋಜನೆ ಹಾಗೂ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳು 2000–01ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಮಾರ್ಚ್ 2001ರಲ್ಲಿ ಹಣ ಬಿಡುಗಡೆಯಾಗಿರುವುದರಿಂದ ಪೂರ್ಣ ಪ್ರಮಾಣದ ಹಣವನ್ನು ಖರ್ಚು ಮಾಡುವಲ್ಲಿ ವಿಳಂಬವಾಗಿರುತ್ತದೆ.
3. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಾದ ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿ 2000–01ನೇ ಸಾಲಿನಲ್ಲಿ 266, 2001–02ನೇ ಸಾಲಿನಲ್ಲಿ 245 ಹಾಗೂ 2002–03ನೇ ಸಾಲಿನಲ್ಲಿ 221 ಜಲಾನಯನಗಳು ಹೊಸದಾಗಿ ಮಂಜೂರಾಗಿವೆ. ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮದಡಿ 2001–01ನೇ ಸಾಲಿನಲ್ಲಿ 226, 2001–02ನೇ ಸಾಲಿನಲ್ಲಿ 160 ಹಾಗೂ 2002–03ನೇ ಸಾಲಿನಲ್ಲಿ 165 ಜಲಾನಯನಗಳು ಹೊಸದಾಗಿ ಮಂಜೂರಾಗಿದ್ದು, ಜಲಾನಯನಗಳ ಪ್ರಾಥಮಿಕ ಕಾರ್ಯ ಕ್ರಿಯಾ ಯೋಜನೆಗಳನ್ನು ಅಂತಿಮಗೊಳಿಸುವುದರಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿದೆ.

ಎನ್.ಜಿ.ಇ.ಎಫ್. ಸ್ವಯಂ ನಿವೃತ್ತಿ ಹೊಂದಿದ ನೌಕರರಿಗೆ ನೀಡಬೇಕಾದ ಹಣ

3652 (4153) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರ್ವಜನಿಕ ಉದ್ದಿಮೆ ಎನ್‌ಜಿಇಎಫ್ ನ್ನು ಪೂರ್ಣವಾಗಿ ಮುಚ್ಚಲಾಗಿದೆಯೇ? ಇಲ್ಲದಿದ್ದಲ್ಲಿ, ಎಂದಿನಿಂದ ಮುಚ್ಚಲಾಗುವುದು?

ಆ) ಈ ಕಾರ್ಖಾನೆಯ ಹಲವಾರು ನೌಕರರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕಾರ್ಖಾನೆ ಇನ್ನು ಮುಚ್ಚದಿದ್ದರೂ ಸಹ ಸ್ವಯಂ ನಿವೃತ್ತಿಗೊಳಿಸಿರುವುದು ನಿಜವೆ?

ಇ) ಈ ರೀತಿ ಸ್ವಯಂ ನಿವೃತ್ತಿಗೊಳಿಸಿದ್ದರೂ ಅವರಿಗೆ ಬಾಕಿ ನೀಡಬೇಕಾದ ಭವಿಷ್ಯ ನಿಧಿ ಇನ್ನಿತರ ಹಣವನ್ನು ಇನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಸ್ವಯಂ ನಿವೃತ್ತಿಗೊಂಡ ನಂತರ ನೌಕರರಿಗೆ ಕೂಡಲೇ ಬಾಕಿ ಹಣ ಪಾವತಿಸಬೇಕಾಗಿರುವುದು ಆ ಸಂಸ್ಥೆಯ ಕರ್ತವ್ಯ ಅಲ್ಲವೇ?

ಈ) ಈ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರನ್ನು ಸವಯಂ ನಿವೃತ್ತಿಗೊಳಿಸಿ ಹಲವಾರು ನಿವೃತ್ತ ನೌಕರರನ್ನು ಹೆಚ್ಚಿನ ವೇತನ ನೀಡಿ ಪುನರ್ ನೇಮಕ ಮಾಡಿಕೊಂಡಿರುವುದು ನಿಜವೇ; ಅವರುಗಳ ವಿವರ ನೀಡುವುದು ಮತ್ತು ಈ ರೀತಿ ಪುನರ್ ನೇಮಕಗೊಳಿಸಲು ಕಾರಣವೇನು;